ಬಿರುಕಿನಲ್ಲಿ ಕಣ್ಣಿಟ್ಟು ನಮ್ಮನ್ನೇ ನೋಡತಾ ಇದಾರೆ. ಕಣ್ಣು ಹೊಳೀತಾ ಇವೆ. ನೋಡು. ಅವರ ಕಣ್ಣು ಗುಡ್ಡೆ ಹೊಳೀತಾ ಇವೆ. ನಮಗೆ ತಿನ್ನುವುದಕ್ಕೆ ಕೊಡುವಂಥದ್ದು ಅವರ ಹತ್ತಿರ ಏನೂ ಇಲ್ಲ. ತಲೆ ಕೂಡ ಹೊರಗೆ ಹಾಕದೆ 'ಈ ಊರಲ್ಲಿ ತಿನ್ನೋದಕ್ಕೆ ಏನೂ ಇಲ್ಲ' ಅಂದರು. ದೇವರೇ ಕಾಪಾಡು ಅಂತ ಪ್ರಾರ್ಥನೆ ಮಾಡುವುದಕ್ಕೆ ಇಲ್ಲಿಗೆ ಬಂದೆ.

'ವಾಪಸ್ಸು ಯಾಕೆ ಬರಲಿಲ್ಲ. ನೀನು ಬರತೀಯ ಅಂತ ಕಾಯುತಾ ಇದ್ದೆವು.'

'ಪ್ರಾರ್ಥನೆ ಮಾಡೋದಕ್ಕೆ ಬಂದೆ. ಇನ್ನೂ ಮುಗಿದಿಲ್ಲ.

'ಯಾವ ಸೀಮೆ ಇದು, ಅಗ್ರೀಪಿನಾ?

'ಮತ್ತೆ ಭುಜ ಕೊಡವಿದಳು.

'ಅವತ್ತು ರಾತ್ರಿ ಚರ್ಚಿನ ಮೂಲೆಯಲ್ಲಿ ಮಲಗಿದೆವು. ಪಾದ್ರಿಯ ವೇದಿಕೆ ಅರ್ಧ ಕಳಚಿ ಹಾಕಿದ್ದರು. ಅದರ ಹಿಂದೆ ಮಲಗಿದೆವು. ಅಲ್ಲೂ ಗಾಳಿ ಬೀಸುತ್ತಾ ಇತ್ತು. ಅಷ್ಟು ಜೋರಾಗಿರಲಿಲ್ಲ. ನಮ್ಮ ಮೇಲೆ ಬೀಸಿಕೊಂಡು ಊಳಿಡುತ್ತಾ ಮುರುಕಲು ಬಾಗಿಲಲ್ಲಿ ನುಗ್ಗಿಕೊಂಡು ಹೋಗುವುದು, ಬರುವುದು ಕೇಳುತಿತ್ತು. ಹದಿನಾಲ್ಕು ಶಿಲುಬೆ ಸ್ಟೇಷನ್ನುಗಳಲ್ಲಿದ್ದ ಶಿಲುಬೆಗಳನ್ನು ಗಾಳಿಗೈ ಬಡಿಯುತಿತ್ತು. ಚರ್ಚಿನ ಗೋಡೆಯುದ್ದಕ್ಕೂ ನೇತು ಹಾಕಿದ್ದ ಶಿಲುಬೆಗಳು, ಅವಕ್ಕೆ ಕಟ್ಟಿದ್ದ ತಂತಿಗಳು ಗಾಳಿ ಬೀಸಿದಾಗ ಒಂದಕ್ಕೊಂದು ಉಜ್ಜಿ ಕರಕರ ಹಲ್ಲು ಮಸೆದ ಹಾಗೆ



